SC No.71/2022
CW-12 / PW-08

## ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## ಸತ್ರ ಮೊಕದ್ದಮೆ ಸಂಖ್ಯೆ 71/2022

ಚಾ.ಸಾಃ 12 ಪ್ರಾ.ಸಾಃ 08

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 18.08.2025

| | | |
|---|---|---|
| ಸಾಕ್ಷಿಯ ಹೆಸರು | : | ರಾಜೇಶ |
| ತಂದೆಯ ಹೆಸರು | : | ಲಿಂಗಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಆಟೋ ಚಾಲಕ |
| ವಿಳಾಸ | : | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಆಟೋ ಚಾಲಕನಾಗಿ ಕೆಲಸ ಮಾಡುತ್ತೇನೆ. ಬೋಳಮಾನದೊಡ್ಡಿ ರಸ್ತೆಯ ತೇವಭಾವಿ ಹತ್ತಿರ ಜಮೀನಿನಲ್ಲಿ ಯಾವುದೇ ಸ್ಫೋಟವಾಗುವುದನ್ನು ನಾನು ನೋಡಿಲ್ಲ. 1, 6 ನೇ ಆರೋಪಿತರನ್ನು ನಾನು ನೋಡಿಲ್ಲ ಮತ್ತು ಪೋಲಿಸ್ ಠಾಣೆಯಲ್ಲಿ ಅವರನ್ನು ಗುರುತಿಸಿಲ್ಲ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿಸಲಾಯಿತು)

**ಮಾನ್ಯ ಸರಕಾರಿ ಅಭಿಯೋಜಕರಿಂದ ಪಾಟೀ ಸವಾಲುಃ-**

02. ದಿನಾಂಕ 16.03.2021 ರಂದು ಸಂಜೆ 04.15 ಗಂಟೆಗೆ ನಾನು ಬೋಳಮಾನದೊಡ್ಡಿಯಿಂದ ರಾಯಚೂರಿಗೆ ನನ್ನ ಆಟೋದಲ್ಲಿ

ಬರುತ್ತಿರುವಾಗ 1, 6 ನೇ ಆರೋಪಿತರು ತೇವಬಾವಿ ಹತ್ತಿರ ಸಾರ್ವಜನಿಕರ ಆಸ್ತಿಗೆ ನಷ್ಟವಾಗುವ ರೀತಿಯಲ್ಲಿ ಸ್ಫೋಟ ಮಾಡಿದರು ಎನ್ನುವುದು ಸರಿಯಲ್ಲ. ನಂತರ ದಿನಾಂಕ 18.03.2021 ರಂದು ಪೋಲಿಸ್ ಠಾಣೆಯಲ್ಲಿ ಪೋಲಿಸರು ನನಗೆ 1 ನೇ ಆರೋಪಿಯನ್ನು ತೋರಿಸಿದರು ಮತ್ತು ನಾನು 1 ನೇ ಆರೋಪಿಯನ್ನು ಗುರುತಿಸಿದೆನು ಎನ್ನುವುದು ಸರಿಯಲ್ಲ. ಈ ಬಗ್ಗೆ ನಾನು ಪೋಲಿಸರಿಗೆ ಈಗ ಓದಿ ಹೇಳಿದ ರೀತಿ ಹೇಳಿಕೆ ಕೊಟ್ಟಿದ್ದೆನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಸಹಿಯನ್ನು **ನಿಪಿ.೨** ಎಂದು ಗುರುತಿಸಲಾಯಿತು.

03. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೆನೆಂದರೆ ಸರಿಯಲ್ಲ.

(ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.